**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.**2459/2025

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮೋಹನ್ | ಸಿ.ಡಬ್ಲ್ಯೂ-04 |
| ತಂದೆಯ ಹೆಸರು | : | ಪಾಪಯ್ಯ | ಪಿ.ಡಬ್ಲ್ಯೂ-02 |
| ವಯಸ್ಸು | : | 27 ವರ್ಷ | |
| ಉದ್ಯೋಗ | : | ಆಟೋ ಚಾಲಕ | |
| ವಾಸಸ್ಥಳ | : | ತೋಡ್ಲಾರಹಟ್ಟಿ | ದಿಃ 07-02-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ಆರೋಪಿ  ತೋರಿಸಿದ ಸ್ಥಳ  ಪಂಚನಾಮೆಯನ್ನು  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿಃ5 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 5(ಎ) ಅಂತ ಗುರುತಿಸಲಾಯಿತು. ದಿನಾಂಕ  05.10.2025 ರಂದು ಠಾಣೆಯಲ್ಲಿ ಮಧ್ಯಾಹ್ನ 02-00 ಗಂಟೆಗೆ ನಿಪಿ.5 ಕ್ಕೆ ಸಹಿ ಮಾಡಿರುತ್ತೇನೆ. ಆಗ ನನ್ನ ಜೊತೆ ಚಾಸಾ-5 ರವರು ಹಾಜರಿದ್ದರು. ನಿಪಿ.5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಅಮಾನತ್ತು ಪಂಚನಾಮೆ  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು  ನಿಪಿಃ6 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 6(ಎ) ಅಂತ ಗುರುತಿಸಲಾಯಿತು.

ದಿನಾಂಕ 06.10.2025 ರಂದು ಪೊಲೀಸ್ ಠಾಣೆಯಲ್ಲಿ ನಿಪಿ.6 ಕ್ಕೆ ಸಹಿ ಮಾಡಿರುತ್ತೇನೆ. ಆಗ ನನ್ನ ಜೊತೆ ಚಾಸಾ-5, ಪೊಲೀಸರು  ಹಾಗೂ ಆರೋಪಿ  ಹಾಜರಿದ್ದರು. ಮಧ್ಯಾಹ್ನ 02-00 ರಿಂದ 02-30 ರವರೆಗೆ ಮಹಜರ್ ಕ್ರಮ ಜರುಗಿಸಿ ಭಾವಚಿತ್ರವನ್ನು ತೆಗೆದಿರುತ್ತಾರೆ.

ಸಾಕ್ಷಿಯು ನಿಪಿ.4 ರ ಭಾವಚಿತ್ರವನ್ನು ನೋಡಿ ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರ ಎಂದು ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ  ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ಆರೋಪಿಯು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಪಕ್ಕ ಕಳ್ಳತನ ಮಾಡಿದ ಜಾಗವನ್ನು ತೋರಿಸಿದ ಮೇರೆಗೆ ನಿಪಿ.5 ರಂತೆ ಮದ್ಯಾಹ್ನ 03-45 ರಿಂದ 04-10 ರವರೆಗೆ ಮಹಜರ್ ಕ್ರಮ ಜರುಗಿಸಿ ನನ್ನ ಸಹಿಯನ್ನು ಸ್ಥಳದಲ್ಲಿ ಪಡೆದಿರುತ್ತಾರೆ ಎಂದರೆ ಸರಿ. ದಿನಾಂಕ 07.10.2025 ರಂದು ನಿಪಿ.6 ರಂತೆ ಮಹಜರ್ ಕ್ರಮ ಜರುಗಿಸಿ ಕೆಎ-16 ಇಎ-5480 ವಾಹನವನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆಗ ಸಮಯ ಮದ್ಯಾಹ್ನ 03-00 ರಿಂದ 03-20 ಆಗಿತ್ತು ಎಂದರೆ ಸರಿ. ಸದರಿ ಬೈಕನ್ನು ಚಾಸಾ-6 ರವರಿಗೆ ಆರೋಪಿಯು ಮಾರಾಟ ಮಾಡಿದ್ದು, ಚಾಸಾ-6 ರವರು ಠಾಣೆಗೆ ತಂದು ಹಾಜರು ಪಡಿಸಿದರು ಎಂದರೆ ಸರಿ. ಆಗ ಚಾಸಾ-6 ರವರು ಆರೋಪಿಯಿಂದ ಬೈಕನ್ನು ಖರೀದಿಸಿದ್ದೆ ಎಂದು ಹೇಳಿದರು ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಮಹಜರ್ ಸಮಯದಲ್ಲಿ ಸ್ಥಳ ತೋರಿಸಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಬಿ ಜಿ. . ಆರೋಪಿ ಪರ ವಕೀಲರಿಂದಃ**

ಈ ದಿನ ಯಾವ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.ಜಪ್ತು ಪಡಿಸಿಕೊಂಡ ವಾಹನದ ನೊಂದಣಿ ಸಂಖ್ಯೆ ಹಾಗೂ ಬಣ್ಣವನ್ನು ಹೇಳಲು ಆಗುವುದಿಲ್ಲ . ಸ್ಥಳ ಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಜರುಗಿಸಲಾಯಿತು ಎಂದು ಹೇಳಲು ಆಗುವುದಿಲ್ಲ. ನಿಪಿ.5 ಮತ್ತು 6 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.ಯಾರು ಠಾಣೆಯಲ್ಲಿ ವಾಹನ ನಿಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರ್ ಸ್ಥಳದ ಚ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. 07 ಮತ್ತು 08 ನೇ ತಾರೀಖಿನಂದು ಎಷ್ಟು ಬೈಕುಗಳ ಜೊತೆ ಭಾವಚಿತ್ರ ತೆಗೆಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ